## ಹಣ ಗಳಿಕೆಯ ದಾರಿಯೂ ಹೌದು

ನಟಿಯರಾದ ದೀಪಿಕಾ ಪಡುಕೋಣೆ ಹಾಗೂ ಪ್ರಿಯಾಂಕಾ ಚೋಪ್ರಾ ಇಬ್ಬರ ಪ್ರತಿ ಇನ್‌ಸ್ಟಾ ಪೋಸ್ಟ್‌ಗೆ ಒಂದೂವರೆ ಕೋಟಿ ರೂಪಾಯಿ ಇದೆ ಎನ್ನುವವರಿದ್ದಾರೆ. ಫಾಲೋವರ್‌ಗಳು ಹೆಚ್ಚಾಗಿ ಇರುವ ನಟ–ನಟಿಯರಿಗೆ, ಕ್ರೀಡಾಪಟುಗಳಿಗೆ ಸಾಮಾಜಿಕ ಜಾಲತಾಣಗಳ ಪೋಸ್ಟ್ ಕೂಡ ಹಣ ತಂದುಕೊಡುವ ದಾರಿಯಾಗಿರುವುದಂತೂ ದಿಟ.

ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಹಾಕುವ ಒಂದು ಪೋಸ್ಟ್ ಇಪ್ಪತ್ತಮೂರೂ ಮುಕ್ಕಾಲು ಲಕ್ಷ ಡಾಲರ್‌ಗಿಂತ ಹೆಚ್ಚು (ಸುಮಾರು 19.8 ಕೋಟಿ ರೂಪಾಯಿ) ಹಣ ತಂದುಕೊಡುತ್ತದೆ. ಅವರಿಗಿಂತ ಆರೇಳು ಲಕ್ಷ ಕಡಿಮೆ ಡಾಲರ್ ಹಣ ಲಯೊನೆಲ್ ಮೆಸ್ಸಿ ಅವರಿಗೆ ಸಲ್ಲುತ್ತದೆ. ಗಾಯಕಿ ಸೆಲೆನಾ ಗೋಮೆಜ್, ನಟ–ಕುಸ್ತಿ ಪಟು ಡ್ವೇನ್ ಜಾನ್ಸನ್ (ರಾಕ್), ನಟಿ ಕಿಮ್ ಕರ್ದಾಶಿಯನ್ ಇವರೆಲ್ಲರ ಒಂದೊಂದು ಪೋಸ್ಟ್ ಕೋಟಿಗಟ್ಟಲೆ ರೂಪಾಯಿ ತಂದೊಡ್ಡುತ್ತದೆ. ಭಾರತದ ಕ್ರಿಕೆಟಿಗರಲ್ಲಿ ವಿರಾಟ್ ಕೊಹ್ಲಿ ಕೂಡ ಈ ವಿಷಯದಲ್ಲಿ ಹಿಂದೆ ಇಲ್ಲ. ನಟಿಯರಲ್ಲಿ ಆಲಿಯಾ ಭಟ್ ಕೂಡ ಒಂದು ಪೋಸ್ಟ್‌ಗೆ ಸರಾಸರಿ ಒಂದು ಕೋಟಿ ರೂಪಾಯಿ ಗಳಿಸುತ್ತಾರೆನ್ನುವ ವರದಿ ಇದೆ.

ಯೂರೋಪ್ ದೇಶಗಳಲ್ಲಿ ಛಾಯಾಗ್ರಾಹಕರು ಹಕ್ಕುಸ್ವಾಮ್ಯವನ್ನು ಬಳಸಿ ಜನಪ್ರಿಯರಿಂದ ಹಣ ವಸೂಲು ಮಾಡಲೂ ಸಾಮಾಜಿಕ ಜಾಲತಾಣಗಳು ದಾರಿ ಕಲ್ಪಿಸಿಕೊಟ್ಟಿವೆ. ಕೆಲವು ಛಾಯಾಗ್ರಾಹಕರು ಜನಪ್ರಿಯರ ಕ್ಯಾಂಡಿಡ್ ಫೋಟೊಗಳನ್ನು ತೆಗೆಯುತ್ತಾರೆ. ಅವನ್ನು ನಟ–ನಟಿಯರು ತಂತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಪೋಸ್ಟ್ ಮಾಡುತ್ತಾರೆ. ಆಗ ಫೋಟೊ ತೆಗೆದವರ ಹೆಸರನ್ನು ಹಾಕದೇ ಇದ್ದರೆ, ಹಕ್ಕುಸ್ವಾಮ್ಯ ಇಟ್ಟುಕೊಂಡು ಹಣ ವಸೂಲಿಗೆ ಮುಂದಾಗುವುದು ಮಾಮೂಲಾಗಿದೆ. ಇದು ನ್ಯಾಯಯುತವೂ ಆಗಿರುವುದರಿಂದ, ಕೋರ್ಟ್‌ಗಳ ಮೊರೆಹೋದರೆ ದೊಡ್ಡ ಮೊತ್ತ ಸಂದಾಯವಾಗುವುದರಲ್ಲಿ ಅನುಮಾನವೇ ಇಲ್ಲ.





ಆಟದ ಕಾರಣದಿಂದಾಗಿ ಜನಪ್ರಿಯತೆ ಗಳಿಸಿದ ಸೆರೆನಾ, ದೇಹದ ಕಾರಣದಿಂದಾಗಿ ಟ್ರೋಲ್‌ಗೂ ಒಳಗಾಗಿದ್ದರು.

ರಾಜಕಾರಣಿಯೂ ಆಗಿರುವ ಹಾಡುಗಾರ ಬಾಬುಲ್ ಸುಪ್ರಿಯೊ ಆಗ ಒಂದು ಟೀಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. 'ಪಂದ್ಯವನ್ನು ಗೆಲ್ಲಿಸಿಕೊಡುವ ಯೋಚನೆ ಮಾಡದೆ ಅಂಜುಬುರುಕನಂತೆ **Hanuma Bihari** ಆಡಿದರು' ಎಂಬ ಧಾಟಿಯಲ್ಲಿ ಬರೆದಿದ್ದರು. ಅದಕ್ಕೆ ಹನುಮ ಪ್ರತಿಕ್ರಿಯಿಸಿದ್ದು ಹೀಗೆ: '***Hanuma Vihari**'. ಅಂದರೆ ತಮ್ಮ ಹೆಸರಿನ 'ವಿಹಾರಿ' ಎನ್ನುವುದನ್ನು 'ಬಿಹಾರಿ' ಎಂದು ತಪ್ಪು ಬರೆದಿದ್ದೀರಿ ಎಂದಷ್ಟೇ ಹೇಳಿ ಅವರು ಸುಮ್ಮನಾಗಿದ್ದರು. ಚೆಂಡು ಹಿಡಿಯಲೂ ಬಾರದವರು ಕ್ರಿಕೆಟಿಗರಿಗೆ ಇಂತಹ ಬೋಧನೆ ಮಾಡಲು ಮುಂದಾದಾಗ ಕೊಡಬಹುದಾದ ಗಮನಾರ್ಹ ಮಾಂಯ್ರಾ ತರಹ ಹನುಮ ವಿಹಾರಿಯ ಪ್ರತಿಕ್ರಿಯೆ ಇತ್ತು.

ಅಮೆರಿಕದ ತಾರಾ ಬ್ಯಾಸ್ಕೆಟ್‌ಬಾಲ್ ಆಟಗಾರ ಕೆವಿನ್ ಡುರ್‍ಯಾಂಟ್ ಟ್ರೋಲರ್‌ಗಳಿಗೆ ಪ್ರತಿಕ್ರಿಯಿಸಲೆಂದೇ 'ಬರ್ನರ್ ಟ್ವಿಟರ್ ಖಾತೆಗಳನ್ನು' ತೆರೆದಿದ್ದರು. ಟ್ರೋಲರ್‌ಗಳಿಗೆಲ್ಲ ತಪ್ಪದೆ ಪ್ರತಿಕ್ರಿಯೆಗಳನ್ನು ನೀಡಿ, ಸುಮ್ಮನಾಗಿಸುವುದು ಅವರಿಗೆ ಗೀಳಾಗಿತ್ತು.

ಅಮೆರಿಕದ ಫುಟ್‌ಬಾಲ್ ಆಟಗಾರ ಜೆರ್ಮೈನ್ ವೈಟ್‌ಹೆಡ್ ಕಥೆಯೇ ಬೇರೆ. ಅವರು ಕ್ಲೀವ್‌ಲ್ಯಾಂಡ್ ಬ್ರೌನ್ಸ್ ತಂಡದ 'ಸೇಫ್ಟಿ' ಆಗಿ ಆಡುತ್ತಿದ್ದಾಗ, ಪಂದ್ಯವೊಂದು ಮುಗಿದ ನಂತರ ಕ್ರೀಡಾಭಿಮಾನಿಗಳು ಅವರನ್ನು ವಿಪರೀತ ಟ್ರೋಲ್ ಮಾಡಿದರು. ಜನರ ಟೀಕೆಗಳನ್ನು ಓದಿ ಓದಿ ರೋಸಿಹೋದ ಜೆರ್ಮೈನ್, ಮಾನಸಿಕ ಸ್ಥಿಮಿತ ಕಳೆದುಕೊಂಡರು. ಟ್ರೋಲ್ ಮಾಡಿದವರಿಗೆ 'ಕಡಿಯುವೆ, ಕೊಚ್ಚುವೆ' ಭಾಷೆಯಲ್ಲಿ